

# ತಲಸ್ಸೇಮಿಯಾಗೆ ಸ್ಟೆಮ್‌ಸೆಲ್ಸ್ ಕಸಿ

**ರಕ್ತದ ಕ್ಯಾನ್ಸರ್ ಮಾರಣಾಂತಿಕವಾದುದಾದರೂ ಉತ್ತಮ ಚಿಕಿತ್ಸೆಯಿದೆ. ಆರಂಭದ ಹಂತದಲ್ಲಿ ಪತ್ತೆಯಾದರೆ ಸಂಪೂರ್ಣ ಗುಣಪಡಿಸಲೂ ಸಾಧ್ಯವಿದೆ. ರಕ್ತದ ಕಾಂಡಕೋಶಗಳಿಗೆ ಉಂಟಾಗುವ ತೊಂದರೆಗಳಿಂದ ತಲಸ್ಸೇಮಿಯಾ, ಲಿಂಫೋಮಾ, ಮೈಲೋಮಾ, ಲ್ಯುಕೇಮಿಯಾದಂತಹ ರೋಗ ಬರುವ ಸಾಧ್ಯತೆ ಇದೆ. ಸ್ಟೆಮ್‌ಸ್ಟೆಲ್ಸ್ ಕಸಿಯಿಂದ ನಿವಾರಿಸಬಹುದು.**

■ **ಉಮಾ ಅನಂತ್**

ಬೆಂಗಳೂರಿನ 12 ವರ್ಷ ವಯಸ್ಸಿನ ಬಾಲಕ ಚಿರಾಗ್‌ಗೆ ತಲಸ್ಸೇಮಿಯಾ ಸಮಸ್ಯೆಯಿತ್ತು. ಮೂರು ತಿಂಗಳ ಮಗುವಾಗಿದ್ದಾಗಲೇ ಆತನಿಗೆ ರಕ್ತಕ್ಕೆ ಸಂಬಂಧಿಸಿದ ಈ ತೊಂದರೆ ಇರುವುದು ಗೊತ್ತಾಗಿತ್ತು. ಪ್ರತಿ ಮೂರು ವಾರಗಳಿಗೊಮ್ಮೆ ಮಗುವಿನ ದೇಹಕ್ಕೆ ರಕ್ತ ವರ್ಗಾವಣೆ (ಬ್ಲಡ್ ಟ್ರಾನ್ಸ್‌ಫ್ಯೂಷನ್) ಮಾಡಬೇಕಾಗಿತ್ತು. ಅಲ್ಲದೆ ಇದು ಬಹಳ ನೋವಿನಿಂದ ಕೂಡಿದ್ದಾಗಿತ್ತು. ಇದೇ ಪ್ರಕ್ರಿಯೆ ಸುಮಾರು 10 ವರ್ಷಗಳ ಕಾಲವೂ ನಡೆದಿತ್ತು. ಏಕೆಂದರೆ ಮಗುವಿನ ರಕ್ತಕ್ಕೆ ಸರಿಹೊಂದುವ ಸ್ಟೆಮ್‌ಸೆಲ್ಸ್ (ರಕ್ತದ ಕಾಂಡಕೋಶ) ಪಡೆಯುವಲ್ಲಿ ವೈದ್ಯರು ಹಾಗೂ ಮಗುವಿನ ಪೋಷಕರು ವಿಫಲರಾಗಿದ್ದರು. ಕೊನೆಗೆ ಡಿಕೆಎಂಎಸ್ ಡಾಟಾಬೇಸ್ ಸಂಸ್ಥೆ ಬ್ಲಡ್ ಸ್ಟೆಮ್‌ಸೆಲ್ಸ್ ದಾನಿಯನ್ನು ಪತ್ತೆಹಚ್ಚಿ ಕೊಟ್ಟಿದ್ದು, ಜರ್ಮನಿಯ 18 ವರ್ಷದ ಯುವಕ ತನ್ನ ಸ್ಟೆಮ್‌ಸೆಲ್ ನೀಡಿದ್ದ. ಇದನ್ನು ಚೆನ್ನೈಯ ಅಪೊಲೊ ಆಸ್ಪತ್ರೆಯಲ್ಲಿ ಅಸ್ಥಿಮಜ್ಜೆ ಕಸಿ ಮಾಡಿಸಿಕೊಂಡ. ಈ ಪುಟಾಣಿ ಚಿರಾಗ್ ಈಗ ಆರೋಗ್ಯಪೂರ್ಣವಾಗಿದ್ದಾನೆ.

ತಲಸ್ಸೇಮಿಯಾ, ಎಪ್ಲಾಸ್ಟಿಕ್ ಅನೀಮಿಯ, ಲ್ಯುಕೇಮಿಯಾ, ಲಿಂಫೋಮಾ ಮುಂತಾದ ರಕ್ತಕ್ಕೆ ಸಂಬಂಧಿಸಿದ ಕಾಯಿಲೆ ಇದ್ದವರಿಗೆ ಅಸ್ಥಿಮಜ್ಜೆ ಕಸಿ (ಬೋನ್‌ಮಾರೊ ಟ್ರಾನ್ಸ್‌ಪ್ಲಾಂಟ್) ಒಂದೇ ದಾರಿ. ಇದನ್ನು ಶಸ್ತ್ರಚಿಕಿತ್ಸೆ ಮೂಲಕವೇ ಮಾಡಬೇಕಾಗುತ್ತದೆಯಾದರೂ ತಲಸ್ಸೇಮಿಯಾದಂತಹ ಸಮಸ್ಯೆಗೆ ಇದು ಸೂಕ್ತ ಹಾಗೂ ಶಾಶ್ವತ ಪರಿಹಾರವಾಗಿದೆ.

‘ತಲಸ್ಸೇಮಿಯಾ ರೋಗಿಗಳಿಗೆ ರಕ್ತ ವರ್ಗಾವಣೆ ನಿಯಮಿತವಾಗಿ ಮಾಡಿಸಿಕೊಳ್ಳಬೇಕಾಗುತ್ತದೆ. ಇದು ಮಾರಣಾಂತಿಕ ಕಾಯಿಲೆಯಾಗಿದ್ದು, ನಿರಂತರ ಕಾಳಜಿ, ಚಿಕಿತ್ಸೆ ಅತ್ಯಗತ್ಯ. ರಕ್ತದ ವರ್ಗಾವಣೆಯೂ ಬಹಳ ನೋವಿನಿಂದ ಕೂಡಿದ್ದಾಗಿದ್ದು, ಮಕ್ಕಳಿಗೆ ಹಿಂಸೆಯಾಗಿ ಪರಿಣಮಿಸುತ್ತದೆ. ಇದಕ್ಕೆ ಬೋನ್‌ಮಾರೊ ಟ್ರಾನ್ಸ್‌ಪ್ಲಾಂಟ್ ಶಾಶ್ವತ ಪರಿಹಾರ ಒದಗಿಸುತ್ತದೆ’